ಡಿಡಬ್ಲ್ಯೂ.1: ದೇವಿಕಾ ಎಲ್,

**ದಿನಾಂಕಃ23.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ**

6. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದುದಾರರಿಂದ 40 ಸಾವಿರ ಹಣವನ್ನು ಪಡೆದಿದ್ದು, ಅದರಲ್ಲಿ 30 ಸಾವಿರವನ್ನು ಮರುಪಾವತಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತೀರಿ ಯಾವ ದಿನಾಂಕದಂದು 40 ಸಾವಿರ ಹಣವನ್ನು ಪಡೆದುಕೊಂಡಿರುತ್ತೀರೆಂದು ನಿರ್ದಿಷ್ಟ ದಿನಾಂಕ ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಗೆ ನಾನು 30 ಸಾವಿರ ಹಣವನ್ನು ನಗದಾಗಿ ನೀಡಿರುತ್ತೇನೆ. 30 ಸಾವಿರ ಹಣ ಮರುಪಾವತಿಸಿರುವ ದಿನಾಂಕವನ್ನು ಹೇಳಲಾಗುವುದಿಲ್ಲ. 30 ಸಾವಿರ ಹಣವನ್ನು ಮರುಪಾವತಿಸುವಾಗ ಯಾರು ಯಾರು ಹಾಜರಿದ್ದರು ಎಂದರೆ ಸಾಕ್ಷಿಯು ಪಿರ್ಯಾದುದಾರರೇ ನನ್ನ ಎಟಿಎಂ ಕಾರ್ಡನ್ನು ಇಟ್ಟುಕೊಂಡು ನನ್ನ ಖಾತೆಯಿಂದ ಹಣ ಪಡೆದುಕೊಂಡರು. ಪಿರ್ಯಾದುದಾರರು ಯಾವ ಯಾವ ದಿನಾಂಕದಂದು ನಿಮ್ಮ ಎಟಿಎಂನಿಂದ ಹಣ ಪಡೆದುಕೊಂಡರು ಎಂದು ನಿರ್ದಿಷ್ಟ ಹಣ ಮತ್ತು ದಿನಾಂಕವನ್ನು ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಪ್ರತೀ ತಿಂಗಳು ನನಗೆ 10 ನೇ ತಾರೀಖು ನನಗೆ ವೇತನವಾಗುತ್ತಿತ್ತು, ಆ ದಿನಾಂಕದಂದೇ ಪಿರ್ಯಾದುದಾರರು ನನ್ನ ಎಟಿಎಂ ಕಾರ್ಡಿನಿಂದ 10 ಸಾವಿರ ಹಣವನ್ನು ನನ್ನ ಖಾತೆಯಿಂದ ಹಿಂಪಡೆದು ಅದರಲ್ಲಿ 5 ಸಾವಿರ ಹಣವನ್ನು ನನಗೆ ಉಳಿಕೆ ಹಣ ನೀಡುತ್ತಿದ್ದರು. ನಾನು ಚಾಮರಾಜಪೇಟೆಯ ವಿಆರ್ ಪಿಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಂತಹ ಸಮಯದಲ್ಲಿ ಪಿರ್ಯಾದುದಾರರು ಎಟಿಎಂ ನಿಂದ ಹಣ ಪಡೆದುಕೊಳ್ಳುತ್ತಿದ್ದರು.

7. ನಾನು ಕಳೆದ 3-4 ವರ್ಷಗಳ ಹಿಂದೆ ವಿಆರ್‌ಪಿಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆನು. ಪಿರ್ಯಾದುದಾರರಿಂದ ನೀವು ಒಂದೂವರೆ ಲಕ್ಷ ಹಣವನ್ನು ಸಾಲ

ಪಡೆದುಕೊಂಡು ಅದರ ಮರುಪಾವತಿಗಾಗಿ ವಿವಾದಿತ ಚೆಕ್ಕನ್ನು ನೀಡಿದ್ದರೂ ಸಹಾ 40 ಸಾವಿರ ಹಣವನ್ನು ಮಾತ್ರ ಪಡೆದುಕೊಂಡಿದ್ದು, ಅದರಲ್ಲಿ 30 ಸಾವಿರ ಹಣವನ್ನು ಮರುಪಾವತಿಸಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಯಾವಾಗ ನಿಮ್ಮ ಎಟಿಎಂ ಕಾರ್ಡು, ಪಾಸ್ ಪುಸ್ತಕ ಹಾಗೂ ಚೆಕ್ ಪುಸ್ತಕವನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಅಂದಾಜು 2019 ನೇ ಇಸವಿಯಲ್ಲಿ ಪಡೆದುಕೊಂಡಿರಬಹುದು. 2021 ನೇ ಇಸವಿಯಲ್ಲಿ ವಿಜಯನಗರದಲ್ಲಿ ಕೆಲಸಕ್ಕೆ ಸೇರಿದಾಗ ನನಗೆ ಪಾಸ್ ಪುಸ್ತಕದ ಅವಶ್ಯಕತೆ ಇದ್ದ ಕಾರಣ ಪಿರ್ಯಾದುದಾರರನ್ನು ಫೋನ್ ಮೂಲಕ ನನ್ನ ಎಟಿಎಂ ಕಾರ್ಡು, ಪಾಸ್ ಪುಸ್ತಕ ಹಾಗೂ ಚೆಕ್ ಪುಸ್ತಕವನ್ನು ಹಿಂದಿರುಗಿಸುವಂತೆ ಕೇಳಿಕೊಂಡೆನು, ಆದರೆ ಪಿರ್ಯಾದುದಾರರು ಅವುಗಳನ್ನು ಹಿಂದಿರುಗಿಸಲಿಲ್ಲ. ನೀವು ಪಿರ್ಯಾದುದಾರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನಾನು ಪಿರ್ಯಾದುದಾರರಿಗೆ ಹಣ ನೀಡಬೇಕಾಗಿದ್ದ ಕಾರಣ ದೂರು ನೀಡಲು ಹೋಗಲಿಲ್ಲ. ನೀವು ಪಿರ್ಯಾದೂರರಿಂದ ಒಂದೂವರೆ ಲಕ್ಷ ಹಣ ಪಡೆದುಕೊಂಡಿದ್ದರಿಂದ ಅವರ ವಿರುದ್ಧ ದೂರು ದಾಖಲಿಸಿದರೆ ನಿಮಗೆ ತೊಂದರೆಯಾಗುತ್ತೆಂದು ನೀವು ಅವರ ವಿರುದ್ಧ ದೂರು ದಾಖಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅಷ್ಟು ಮೊತ್ತವನ್ನು ಪಡೆದುಕೊಂಡಿರಲಿಲ್ಲ ಎಂದು ನುಡಿಯುತ್ತಾರೆ.

8. ರಾಜಾಜಿನಗರದ 6 ನೇ ಬ್ಲಾಕ್ ನಲ್ಲಿ ನಿಮಗೆ ಸೇರಿದ ಪಿತ್ರಾರ್ಜಿತ ಆಸ್ತಿ ಇದೆ ಎಂದರೆ ಸರಿ. ಆ ಆಸ್ತಿಯನ್ನು ಪಿರ್ಯಾದುದಾರರಿಗೆ ತೋರಿಸಿರುತ್ತೇನೆ ಎಂದರೆ ಸರಿ. ಆಸ್ತಿ ಮಾರಾಟದಿಂದ ಬಂದಂತಹ ಹಣದಿಂದ ಸಾಲವನ್ನು ತೀರಿಸುತ್ತೇನೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ನೀವು ಒಂದೂವರ ಲಕ್ಷ ಹಣ ಸಾಲವಾಗಿ ಪಡೆದುಕೊಂಡು ಅದರ ಮರುಪಾವತಿಗಾಗಿ ಚೆಕ್ ನೀಡಿದ್ದೇನೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಡಿಡಬ್ಲೂ.1: ದೇವಿಕಾ ಎಲ್,**

ಸಾಕ್ಷಿ ಮುಂದುವರೆದು ಪಿರ್ಯಾದುದಾರರಿಗೆ ಸಹಿ ಮಾಡಿದ ಖಾಲಿ ಚೆಕ್ಕನ್ನು ನೀಡಿದ ನಂತರ ಅವರು ನನಗೆ ಹಣ ನೀಡಿದ್ದರು, ಚೆಕ್ಕಿನಲ್ಲಿ ನಾನು ಬರವಣಿಗೆ ಮಾಡಿರುವುದಿಲ್ಲ. ಪಿರ್ಯಾದುದಾರರಿಗೆ ಒಂದೂವರೆ ಲಕ್ಷ ಹಣ ನೀಡಬೇಕಾಗಿರುವ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.